ಸೆಪ್ಟೆಂಬರ್ ಸೋಮವಾರ **5** SEPTEMBER MONDAY

**ಸಂಜೆ 6:30ಕ್ಕೆ**
ವಿದ್ವಾನ್ ಕೃಷ್ಣಮೂರ್ತಿ ಹಾಗೂ ತಂಡ
ನಾದಸ್ವರ

6 : 30 p.m.
Vidwan Krishnamurthy & Party
Nadaswara



**ವಿದ್ವಾನ್ ವಿ ಕೃಷ್ಣಮೂರ್ತಿ**ಯವರು ತಾತ ನಾಗಸ್ವರ ವಿದ್ವಾನ್ ಟಿ ಪಾಪಯ್ಯವರ ಬಳಿ ಮೊದಲು ಸಂಗೀತಾಭ್ಯಾಸವನ್ನು ಮಾಡಿದರು. ನಂತರ ಮೈಸೂರು ಆಸ್ಥಾನ ವಿದ್ವಾಂಸರಾದ ನಾಗಸ್ವರ ವಿದ್ವಾನ್ ಮೈಸೂರು ಎನ್ ನಾಗರಾಜು ಮತ್ತು ಆರ್ ಪಾರ್ಥಸಾರಥಿಯವರ ಬಳಿ ಕಲಿತರು. ಜೊತೆಗೆ ಸಂಗೀತ ವಿದ್ವಾನ್ ಬಳ್ಳಾರಿ ವೆಂಕಟೇಶಾಚಾರ್ ಅವರ ಹತ್ತಿರ ಕೂಡ ಸಂಗೀತ ಕಲಿತಿದ್ದಾರೆ. ಆಕಾಶವಾಣಿಯ ಎ ದರ್ಜೆಯ ಕಲಾವಿದರಾಗಿರುವ ಇವರು ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೇಶದ ನಾನಾಕಡೆಗಳಲ್ಲಿ ನಾಗಸ್ವರ ಕಾರ್ಯಕ್ರಮ ನೀಡಿದ್ದಾರೆ.

# ಸೆಪ್ಟೆಂಬರ್ 6 SEPTEMBER
## ಮಂಗಳವಾರ TUESDAY

| | |
|---|---|
| ಸಮಯ | : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ |
| ವ್ಯಾಖ್ಯಾನ ವಿಷಯ | : ಕೃಷ್ಣಸಾರಥ್ಯ |
| ವಾಚನಕಾರರು | : ವಿದುಷಿ ಶುಭಾ ರಾಘವೇಂದ್ರ |
| ವ್ಯಾಖ್ಯಾನಕಾರರು | : ಡಾ ಕಬ್ಬಿನಾಲೆ ವಸಂತ ಭಾರದ್ವಾಜ್ |

**ಸಂಜೆ 6:30ಕ್ಕೆ**

| | |
|---|---|
| ವಿದ್ವಾನ್ ಕೃಷ್ಣಮೋಹನ್ | |
| ವಿದ್ವಾನ್ ರಾಂಕುಮಾರ್ ಮೋಹನ್ | ದ್ವಂದ್ವ ಹಾಡುಗಾರಿಕೆ |
| ವಿದ್ವಾನ್ ಎಲ್ ರಾಮಕೃಷ್ಣನ್ | ವಯೋಲಿನ್ |
| ವಿದ್ವಾನ್ ತ್ರಿಚೂರ್ ಆರ್ ಮೋಹನ್ | ಮೃದಂಗ |
| ವಿದ್ವಾನ್ ಕೋವೈ ಸುರೇಶ್ | ಘಟ |

6 : 30 p.m.

| | |
|---|---|
| Vidwan Krishna Mohan | Vocal Duet |
| Vidwan Ramkumar Mohan | Vocal Duet |
| Vidwan L.Ramakrishnan | Violin |
| Vidwan Trichur R Mohan | Mridangam |
| Vidwan Kovai Suresh | Ghatam |



**ತ್ರಿಚೂರ್ ಸಹೋದರರು** ಎಂದೇ ಖ್ಯಾತರಾಗಿರುವ ಶ್ರೀ **ಕೃಷ್ಣಮೋಹನ್** ಹಾಗೂ **ರಾಂಕುಮಾರ್** ಹಿರಿಯ ಮೃದಂಗ ವಿದ್ವಾಂಸಕಾರದ ತ್ರಿಚೂರ್ ಮೋಹನ್ ಅವರ ಪುತ್ರರು. ಮೊದಲಲ್ಲಿ ಶ್ರೀಮತಿ ಬಾಲಮಣಿ ಈಶ್ವರ್, ನಂತರದಲ್ಲಿ ನೆಯ್ಯಂತಿಕರ ಮೋಹನಚಂದ್ರನ್ ಹಾಗೂ ಈಗ ಪದ್ಮಭೂಷಣ ಶ್ರೀ ಪಿ ಎಸ್ ನಾರಾಯಣಸ್ವಾಮಿಯವರಲ್ಲಿ ಕಲಿಯುತ್ತಿದ್ದಾರೆ.ತಂದೆಯವರ ಪ್ರಭಾವದಿಂದ ಲಯದ ಮೇಲೆ ಹಿಡಿತ ಸಾಧ್ಯವಾಗಿದೆ.ಸಂಪ್ರದಾಯಶುದ್ಧವಾದ, ಭಾವಪೂರ್ಣವಾದ ಪ್ರಸ್ತುತಿಗೆ ಈ ಸಹೋದರರು ಹೆಸರುವಾಸಿ.ಸಹೋದರರಿಬ್ಬರೂ ಒಬ್ಬರಾದ ನಂತರ ಮತ್ತೊಬ್ಬರು ಸುದೀರ್ಘವಾದ ಹಾಗೂ ಚುಟುಕಾದ ಸಂಗತಿಗಳನ್ನು ಹಾಡುತ್ತಾ, ರಾಗವನ್ನು ಶೋಧಿಸಿ, ವಿಸ್ತರಿಸುವ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದಾರೆ.ಇಂತಹ ವಿಶಿಷ್ಟ ಹಾಗೂ ಪ್ರಭಾವಶಾಲಿ ಆಲಾಪನಾ ಶೈಲಿ ಹಿಂದಿನ ಯುಗಳ ಗಾಯಕರ್ಾರಲ್ಲೂ ಕಂಡುಬರುವುದಿಲ್ಲ ಎನ್ನುವುದು ಹೆಚ್ಚಿನ ಖ್ಯಾತ ವಿಮರ್ಶಕರ ಅಭಿಪ್ರಾಯ.

| | |
|---|---|
| ಸಮಯ | : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ |
| ವ್ಯಾಖ್ಯಾನ ವಿಷಯ | : ಸಂಜಯ ದೌತ್ಯ |
| ವಾಚನಕಾರರು | : ವಿದುಷಿ ಇಂದಿರಾ ರಾಘವೇಂದ್ರ |
| ವ್ಯಾಖ್ಯಾನಕಾರರು | : ಡಾ ಎನ್ ಕೆ ರಾಮಶೇಷನ್ |

**ಸಂಜೆ 6:30ಕ್ಕೆ**

| | |
|---|---|
| ವಿದ್ವಾನ್ ಚಿತ್ರವೀಣಾ ಎನ್ ರವಿಕಿರಣ್ | ಚಿತ್ರವೀಣಾ |
| ವಿದುಷಿ ಅಕ್ಕರೈ ಶುಭಲಕ್ಷ್ಮಿ | ವಯೊಲಿನ್ |
| ವಿದ್ವಾನ್ ಕೆ ವಿ ಪ್ರಸಾದ್ | ಮೃದಂಗ |
| ವಿದ್ವಾನ್ ಜಿ ಎಸ್ ರಾಮಾನುಜಂ | ಘಟ |

**6 : 30 p.m.**

| | |
|---|---|
| Vidwan Ravi Kiran | Chitraveena |
| Vidusi Akkarai Subhalaskhmi | Violin |
| Vidwan K.V.Prasad | Mridangam |
| Vidwan G.S.Ramanjunam | Ghatam |



ಬಾಲಪ್ರತಿಭೆಯಾದ **ರವಿಕಿರಣ್** ತಮ್ಮ ಮೂರನೇ ವರ್ಷದಲ್ಲೇ 350ಕ್ಕೂ ಹೆಚ್ಚು ರಾಗಗಳನ್ನು ಗುರುತಿಸಿ, ಐದನೇ ವರ್ಷದಲ್ಲಿ ಗಾಯನ ಕಛೇರಿ ಮಾಡಲು ಪ್ರಾರಂಭಿಸಿದರು. ತಂದೆ ಚಿತ್ರವೀಣಾ ನರಸಿಂಹನ್ ಅವರ ವಿಶಿಷ್ಟ ಮಾರ್ಗದರ್ಶನದಲ್ಲಿ ಎರಡು ವರ್ಷಗಳಲ್ಲಿ 500ಕ್ಕೂ ಹೆಚ್ಚು ಕೃತಿಗಳನ್ನು ಕಲಿತು ತಮ್ಮ ಕೃತಿಭಂಡಾರವನ್ನು ಶ್ರೀಮಂತಗೊಳಿಸಿಕೊಂಡರು. ಖ್ಯಾತ ಗಾಯಕಿ ಟಿ ಬೃಂದಮ್ಮ ಅವರಲ್ಲಿ ಸುಮಾರು 10ವರ್ಷಗಳ ಕಾಲ ಕಲಿತ ಹೆಗ್ಗಳಿಕೆ ಇವರದು. ಚಿತ್ರವೀಣಾ ಕಲಾವಿದನಾಗಿ, ಗಾಯಕನಾಗಿ, ಗುರುವಾಗಿ, ವಾಗ್ಗೇಯಕಾರನಾಗಿ ಇವರು ಪ್ರಖ್ಯಾತರು. ಭಾರತೀಯ ಮೆಲೋಡಿಕ್ ಹಾಗೂ ಪಾಶ್ಚಾತ್ಯ ಹಾರ್ಮೊನಿಕ್ ಶೈಲಿಯನ್ನು ಬೆಸೆಯುವ ಹೊಸ ಪರಿಕಲ್ಪನೆಯಲ್ಲಿ ಮೆಲ್‌ಹಾರ್ಮೊನಿಯನ್ನು ಸೃಷ್ಟಿಸಿದ್ದಾರೆ.ಎರಡನೇ ವರ್ಷದಲ್ಲೇ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಫೆಲೋ ಆದ ರವಿಕಿರಣ್ ಹಲವಾರು ಅಂತರ್ರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಪ್ರಶಸ್ತಿ, ಬಹುಮಾನಗಳನ್ನು ಪಡೆದಿದ್ದಾರೆ.ಇತ್ತೀಚೆಗೆ 1330 ತಿರುಕ್ಕುರಳ್ ಪದ್ಯಗಳಿಗೆ 16ಗಂಟೆಗಳಲ್ಲಿ ರಾಗಸಂಯೋಜನೆ ಮಾಡಿ ವಿಶಿಷ್ಟ ದಾಖಲೆ ಸ್ಥಾಪಿಸಿದ್ದಾರೆ.

# ಸೆಪ್ಟೆಂಬರ್ ಗುರುವಾರ 8 SEPTEMBER THURSDAY

ಸಮಯ : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಸಂಧಿಯೋ ಸಮರವೋ
ವಾಚನಕಾರರು : ವಿದುಷಿ ಅನ್ನಪೂರ್ಣ ನಾಗೇಂದ್ರ
ವ್ಯಾಖ್ಯಾನಕಾರರು : ಶ್ರೀನಿವಾಸ ಫಣಿ

**ಸಂಜೆ 6:30ಕ್ಕೆ**

| | |
|---|---|
| ವಿದ್ವಾನ್ ಟಿ ಎಂ ಕೃಷ್ಣ | ಗಾಯನ |
| ವಿದ್ವಾನ್ ಆರ್.ಕೆ. ಶ್ರೀರಾಂಕುಮಾರ್ | ವಯೋಲಿನ್ |
| ವಿದ್ವಾನ್ ಮನೋಜ್. ಶಿವ | ಮೃದಂಗ |
| ವಿದ್ವಾನ್ ಗುರುಪ್ರಸನ್ನ | ಖಂಜಿರ |

**6 : 30 p.m.**

| | |
|---|---|
| Vidwan T.M.Krishna | Vocal |
| Vidwan R.K. Sriramkumar | Violin |
| Vidwan Manoj Siva | Mridangam |
| Vidwan Gururprasanna | Khanjeera |



**ವಿದ್ವಾನ್ ಟಿ ಎಂ ಕೃಷ್ಣ** ಕೇವಲ ಶ್ರೇಷ್ಠಮಟ್ಟದ ಸಂಗೀತಗಾರರಷ್ಟೇ ಅಲ್ಲ, ಸಂಗೀತವನ್ನು ಕುರಿತು ತಮ್ಮದೇ ಆದ ನಿಲುವನ್ನೂ ಹೊಂದಿದ್ದಾರೆ. ಸಮಾಜ, ರಾಜಕೀಯ, ಉಳಿದ ಕಲಾಪ್ರಕಾರಗಳು ಹೀಗೆ ಹತ್ತು ಹಲವಾರು ವಿಷಯಗಳನ್ನು ಕುರಿತು ಸಂಗೀತದಷ್ಟೇ ಅಧಿಕಾರಯುತವಾಗಿ ಮಾತನಾಡಬಲ್ಲರು, ಬರೆಯಬಲ್ಲರು. ಟಿ ಎಂ ಕೃಷ್ಣ ಅವರು ವಿದ್ವಾನ್ ಬಿ ಸೀತಾರಾಮ ಶರ್ಮ ಅವರಲ್ಲಿ ಸಂಗೀತ ಶಿಕ್ಷಣ ಪ್ರಾರಂಭಿಸಿ, ನಂತರ ರಾಗ–ತಾನ–ಪಲ್ಲವಿ ಕುರಿತಂತೆ ಚೆಂಗಲ್‌ಪೇಟ್ ರಂಗನಾಥನ್ ಅವರ ಬಳಿ ವಿಶೇಷ ತರಬೇತಿ ಪಡೆದರು. ನಂತರ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರಲ್ಲಿ ಉನ್ನತ ಶಿಕ್ಷಣ ಪಡೆದರು.12ನೇವರ್ಷದಲ್ಲಿ ಮ್ಯೂಸಿಕ್ ಅಕಾಡೆಮಿ ಸಂಘಟಿಸಿದ ಸ್ಪಿರಿಟ್ ಆಫ್ ಯೂತ್ ಸರಣಿಯಲ್ಲಿ ಕಾರ್ಯಕ್ರಮ ನೀಡಿದರು.ದೇಶವಿದೇಶಗಳಲ್ಲಿ ತುಂಬಾ ಬೇಡಿಕೆಯಿರುವ ಈ ಕಲಾವಿದ ಸಾವಿರಾರು ಕಾರ್ಯಕ್ರಮಗಳನ್ನು, ಪ್ರಾತ್ಯಕ್ಷಿಕೆಗಳನ್ನು, ಭಾಷಣಗಳನ್ನು ನಡೆಸಿಕೊಟ್ಟಿದ್ದಾರೆ.ಅವರ ಕೃತಿ **ಸದರನ್ ಮ್ಯೂಸಿಕ್** ಸಂಗೀತ ಕ್ಷೇತ್ರದಲ್ಲಿ ಒಂದು ಅಲೆಯನ್ನೇ ಸೃಷ್ಟಿಸಿದೆ.ಸಂಗೀತದಲ್ಲೂ ನಿರಂತರ ಹುಡುಕಾಟ ನಡೆಸುತ್ತಿರುವ ಇವರು ತಮ್ಮ ಈ ಮಾರ್ಗದಲ್ಲಿ ತೊಡಕಾಗಬಹುದಾದ ಎಲ್ಲಾ ರೂಢಿಗತ ಆಚರಣೆಗಳನ್ನು ಪ್ರಶ್ನಿಸುತ್ತಾ ಸಾಗಿದ್ದಾರೆ.ಸಂಗೀತದಲ್ಲಿ ಕಾಣುತ್ತಿರುವ ಅಸಮಾನತೆಯ ಬಗ್ಗೆ ಮಾತನಾಡುತ್ತಲೇ ಸಂಗೀತವನ್ನು ಜನರ ನಡುವೆ ತೆಗೆದುಕೊಂಡು ಹೋಗಲು ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

# ಸೆಪ್ಟೆಂಬರ್ ಶುಕ್ರವಾರ 9 SEPTEMBER FRIDAY

| | |
|---|---|
| ಸಮಯ | : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ |
| ವ್ಯಾಖ್ಯಾನ ವಿಷಯ | : ವಿದುರಾತಿಥ್ಯ |
| ವಾಚನಕಾರರು | : ವಿದುಷಿ ನಾಗಶ್ರೀ ನಾಗೇಶ್ |
| ವ್ಯಾಖ್ಯಾನಕಾರರು | : ಶ್ರೀ ಸಿ ಎನ್ ಸುಬ್ಬಣ್ಣ |

**ಸಂಜೆ 6:30ಕ್ಕೆ**

| | |
|---|---|
| ವಿದ್ವಾನ್ ಕದ್ರಿ ಗೋಪಾಲನಾಥ್ | ಸ್ಯಾಕ್ಸೋಫೋನ್ |
| ವಿದುಷಿ ಕನ್ಯಾಕುಮಾರಿ | ವಯೋಲಿನ್ |
| ವಿದ್ವಾನ್ ಹರಿಕುಮಾರ್ | ಮೃದಂಗ |
| ವಿದ್ವಾನ್ ರಾಜೇಂದ್ರ ನಾಕೋಡ್ | ತಬಲಾ |
| ವಿದ್ವಾನ್ ರಾಜಶೇಖರ್ | ಮೋರ್ಸಿಂಗ್ |

**6 : 30 p.m.**

| | |
|---|---|
| Vidwan Kadri Gopalnath | Saxophone |
| Vidushi Kanyakumari | Violin |
| Vidwan Harikumar | Mridangam |
| Vidwan Rajendra Nakod | Tabla |
| Vidwan Rajasekar- | Morsing |



**ಕದ್ರಿ ಗೋಪಾಲನಾಥ್** ತಂದೆ ತನಿಯಪ್ಪನವರಿಂದ ಸಂಗೀತಕ್ಕೆ ಪ್ರವೇಶ ಪಡೆದರು. ಮೈಸೂರು ಅರಮನೆಯ ಬ್ಯಾಂಡ್ ತಂಡವೊಂದರಲ್ಲಿ ಸ್ಯಾಕ್ಸೋಫೋನ್ ನೋಡಿ ಅದರ ಸೆಳೆತಕ್ಕೊಳಗಾದರು.ಗೋಪಾಲಕೃಷ್ಣ ಅಯ್ಯರ್ ಅವರಲ್ಲಿ ಸ್ಯಾಕ್ಸೋಫೋನ್ ಕಲಿತರು.ನಂತರದಲ್ಲಿ ಇವರ ಪ್ರತಿಭೆಯನ್ನು ಗುರುತಿಸಿದ ವಿದ್ವಾನ್ ಟಿ ವಿ ಗೋಪಾಲಕೃಷ್ಣನ್ ಇವರಿಗೆ ಮಾರ್ಗದರ್ಶನ ನೀಡಿದರು. 1980ರಲ್ಲಿ ಜಾಸ್ ಫೆಸ್ಟಿವಲ್‌ನಲ್ಲಿ ಇವರು ನೀಡಿದ ಕಾರ್ಯಕ್ರಮವನ್ನು ಮೆಚ್ಚಿಕೊಂಡ ಜಾನ್ ಹ್ಯಾಂಡಿ ಇವರನ್ನು ತಮ್ಮೊಂದಿಗೆ ನುಡಿಸಲು ಅಹ್ವಾನಿಸಿದರು .ಅವರೊಂದಿಗೆ ಇವರು ವಿಶ್ವದ ಎಲ್ಲೆಡೆ ಕಾರ್ಯಕ್ರಮ ನೀಡಿದ್ದಾರೆ.ಎ ಆರ್ ರೆಹಮಾನ್ ನಿರ್ದೇಶನದಲ್ಲಿ ಸಿನಿಮಾದಲ್ಲೂ ಕೆಲಸ ಮಾಡಿದ್ದಾರೆ.ಇಪ್ಪತ್ತು ವರ್ಷಗಳ ಶ್ರಮದಿಂದ ಈ ವಾದ್ಯದಲ್ಲಿ ಪ್ರಾವಿಣ್ಯತೆ ಹೊಂದಿ, ಕರ್ನಾಟಕ ಸಂಗೀತಕ್ಕೆ ಅದನ್ನು ಒಗ್ಗಿಸಿಕೊಳ್ಳುವ ದೃಷ್ಟಿಯಿಂದ ಒಂದಿಷ್ಟು ಮಾರ್ಪಾಡುಮಾಡಿಕೊಂಡು "ಸ್ಯಾಕ್ಸೋಫೋನ್ ಚಕ್ರವರ್ತಿ"ಯಾಗಿದ್ದಾರೆ.ಪದ್ಮಶ್ರೀ,ಸಂಗೀತ ಕಲಾಶಿಖಾಮಣಿ ಸೇರಿದಂತೆ ಹಲವು ಪ್ರಶಸ್ತಿಗಳ ಗರಿ ಇವರ ಮುಡಿಯಲ್ಲಿದೆ.

# ಸೆಪ್ಟೆಂಬರ್ ಶನಿವಾರ 10 SEPTEMBER SATURDAY

ಸಮಯ : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಕೃಷ್ಣ ಸಂಧಾನ–1
ವಾಚನಕಾರರು : ವಿದುಷಿ ವಸಂತ ವೆಂಕಟೇಶ್
ವ್ಯಾಖ್ಯಾನಕಾರರು : ಕೃ. ಪಾ. ಮಂಜುನಾಥ್

**ಸಂಜೆ 6:30ಕ್ಕೆ**
ವಿದುಷಿ ಶ್ರೀರಂಜನಿ ಹಾಗೂ ವಿದುಷಿ ಗಾಯತ್ರಿ
ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಜುಗಲ್‌ಬಂದಿ
ವಿದ್ವಾನ್ ಕೋದಂಪಲ್ಲಿ ಗೋಪಕುಮಾರ್ ವಯೋಲಿನ್
ವಿದ್ವಾನ್ ವೀರಭದ್ರಯ್ಯ ಹಿರೇಮಠ್ ಹಾರ್ಮೋನಿಯಂ
ವಿದ್ವಾನ್ ರವಿಶಂಕರ್ ಶರ್ಮ ಮೃದಂಗ
ಪಂಡಿತ್ ಕಿರಣ್ ಯಾವಗಲ್ ತಬಲಾ

6 : 30 p.m.
Vidushi Sriranjini & Vidushi Gayatri
Carnatic Hindustani Jugalbandi
Vidwan Kodampally Gopakumar Violin
Vidwan Veerabhadraiah Hiremath Harmonium
Vidwan Ravishankar Sharma Mridangam
Pandit Kiran Yavagal Tabla





**ಶ್ರೀರಂಜನಿ ಕೋದಂಪಲ್ಲಿ** ಹೊಸ ತಲೆಮಾರಿನ ಕರ್ನಾಟಕ ಸಂಗೀತ ಕಲಾವಿದೆ. ಸಂಗೀತಗಾರರ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ತಾತ ಕೋದಂಪಲ್ಲಿ ಗೋಪಾಲ ಪಿಳ್ಳೈ ಬಳಿ ಸಂಗೀತ ಶಿಕ್ಷಣ ಪ್ರಾರಂಭಿಸಿದರು. ಇವರು ವಿದುಷಿ ನೀಲಾ ರಾಂಗೋಪಾಲ್ ಅವರ ಬಳಿಯಲ್ಲಿ ಕಲಿಯುತ್ತಿದ್ದಾರೆ. ದೇಶದ ಹಲವು ಸಭೆಗಳಲ್ಲಿ ಕಾರ್ಯಕ್ರಮ ನೀಡಿರುವ ಇವರು ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪಿ ಎಚ್ ಡಿ ಗಾಗಿ ಅಧ್ಯಯನ ನಡೆಸುತ್ತಿದ್ದಾರೆ.

**ಗಾಯತ್ರಿ ಅಶೋಕನ್** ಅವರು ಪ್ರಾರಂಭದಲ್ಲಿ ಕರ್ನಾಟಕ ಸಂಗೀತ ಕಲಿತು ನಂತರ ಡಾ ಅಲ್ಕ ದಿಯೊ ಮಾರುಲ್ಕರ್ ಅವರ ಬಳಿ ಹಾಗೂ ಈಗ ಬೆಂಗಳೂರಿನಲ್ಲಿ ಪಂಡಿತ್ ವಿನಾಯಕ್ ತೊರವಿಯವರ ಬಳಿ ಹಿಂದುಸ್ತಾನಿ ಸಂಗೀತ ಕಲಿಯುತ್ತಿದ್ದಾರೆ. ಹಲವು ಸಿನಿಮಾಗಳಲ್ಲಿ ಹಾಡಿದ್ದಾರೆ. ಇವರಿಗೆ ಹಲವು ಪ್ರಶಸ್ತಿಗಳು ಬಂದಿವೆ. ಹಿಂದುಸ್ತಾನಿ ಕಾರ್ಯಕ್ರಮದ ಜೊತೆಗೆ ಜಗತ್ತಿನಾದ್ಯಂತ ಗಜಲ್ ಕಾರ್ಯಕ್ರಮಗಳನ್ನು ಕೂಡ ನೀಡಿದ್ದಾರೆ.

**ಬೆಳಗ್ಗೆ 8–00 ಗಂಟೆಗೆ ಸತ್ಯನಾರಾಯಣ ಪೂಜೆ**

ಸಮಯ : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಕೃಷ್ಣ ಸಂಧಾನ–2
ವಾಚನಕಾರರು : ವಿದುಷಿ ಸತ್ಯಲಕ್ಷ್ಮಿ
ವ್ಯಾಖ್ಯಾನಕಾರರು : ಎ ನಿರಂಜನ್

**ಸಂಜೆ 6:30ಕ್ಕೆ**


**ವಯೋಲಿನ್–ವೀಣಾ–ಸಾರಂಗಿ–ಸಿತಾರ್ ಜುಗಲ್‌ಬಂದಿ**

| | |
|---|---|
| ವಿದ್ವಾನ್ ಎಚ್ ಕೆ ವೆಂಕಟರಾಂ | ವಯೋಲಿನ್ |
| ವಿದ್ವಾನ್ ಅಶ್ವಿನ್ ಆನಂದ್ | ವೀಣೆ |
| ವಿದ್ವಾನ್ ಎಚ್ ಎಸ್ ಸುಧೀಂದ್ರ | ಮೃದಂಗ |
| ಉಸ್ತಾದ್ ಮುರದ್ ಅಲಿ | ಸಾರಂಗಿ |
| ಉಸ್ತಾದ್ ಫತೇ ಅಲಿ | ಸಿತಾರ್ |
| ವಿದ್ವಾನ್ ಉದಯರಾಜಕರ್ಪೂರ್ | ತಬಲಾ |

6 : 30 p.m.

**Violin-Veena-Sarangi-Sitar Jugalbandhi**

| | |
|---|---|
| Vidwan H.K.Venkatram | Violin |
| Vidwan Ashwin Anand | Veena |
| Pandit Murad Ali | Sarangi |
| Pandit Fateh Ali | Sitar |
| Vidwan H.S.Sudheendra | Mridangam |
| Vidwab Udayrajkarpur | Tabla |





ತಮ್ಮ ತಂದೆ ಪ್ರೊ. ಹೆಚ್.ವಿ. ಕೃಷ್ಣಮೂರ್ತಿಯವರಲ್ಲಿ ಸಂಗೀತಾಭ್ಯಾಸ ಮಾಡಿದ **ವಿದ್ವಾನ್ ಹೆಚ್.ಕೆ.ವೆಂಕಟರಾಂ** ಅವರು ತಮ್ಮ ಹನ್ನೊಂದನೆಯ ವಯಸ್ಸಿನಿಂದಲೇ ಕಛೇರಿ ನೀಡಲು ಪ್ರಾರಂಭಿಸಿದರು.ತಮ್ಮ ಪಾಂಡಿತ್ಯ, ಕೌಶಲ ಹಾಗೂ ಸಜ್ಜನಿಕೆಯಿಂದಾಗಿ ಇಂದು ಅತ್ಯಂತ ಬೇಡಿಕೆಯಲ್ಲಿರುವ ಕಲಾವಿದರು ಇವರು.ಕರ್ನಾಟಕ ಸಂಗೀತದ ದಿಗ್ಗಜರಿಗೆಲ್ಲ ಪಕ್ಕವಾದ್ಯ ನುಡಿಸಿದ ಹೆಗ್ಗಳಿಕೆ ಇವರದ್ದು.ದೇಶ ವಿದೇಶಗಳ ಎಲ್ಲಾ ಪ್ರತಿಷ್ಠಿತ ಸಭೆಗಳಲ್ಲಿ ಶ್ರೀಯುತರು ನುಡಿಸಿದ್ದಾರೆ.ವಾದನದೊಂದಿಗೆ ಸಂಗೀತವನ್ನು ಸಂಸ್ಕರಿಸಿ ಇಡುವ 'ಶಬ್ದ' ಎನ್ನುವ ಪ್ರಾಜೆಕ್ಟಿನಲ್ಲಿ ವಿದ್ವಾನ್ ಟಿ.ಎಂ.ಕೃಷ್ಣ ಹಾಗೂ ಶ್ರೀರಾಂ ಕುಮಾರ್ ಅವರೊಂದಿಗೆ ಕೈಜೋಡಿಸಿದ್ದಾರೆ.ಇತ್ತೀಚೆಗೆ ಅವರು ವಿದ್ವಾನ್ ಅಶ್ವಿನ್ ಆನಂದ್ ಮತ್ತು ವಿದ್ವಾನ್ ರವಿಕಿರಣ್ ಅವರೊಂದಿಗೆ ನುಡಿಸುವ ವಿ ತ್ರಯೋ ತುಂಬಾ ಹೆಸರು ಮಾಡಿದೆ.

3

ವೈಣಿಕ **ವಿದ್ವಾನ್ ಅಶ್ವಿನ್ ಆನಂದ್** ಅವರು ಸಂಗೀತ ಕಲಾರತ್ನ ಪ್ರೊ. ಹೆಚ್.ವಿ. ಕೃಷ್ಣಮೂರ್ತಿಯವರಲ್ಲಿ ತಮ್ಮ ಸಂಗೀತಾಭ್ಯಾಸವನ್ನು ಪ್ರಾರಂಭಿಸಿ, ಸಂಗೀತ ಕಲಾನಿಧಿ ವಿದುಷಿ ಆರ್ ವೇದವಲ್ಲಿಯವರಲ್ಲಿ ಕಲಿಕೆಯನ್ನು ಮುಂದುವರೆಸುತ್ತಿದ್ದಾರೆ. ವೀಣೆಯನ್ನು ಹಾಡಿಸುತ್ತಿರುವ ಯುವ ಕಲಾವಿದರೆಂದೇ ಅಶ್ವಿನ್ ಖ್ಯಾತಿ ಪಡೆದಿದ್ದಾರೆ.ಆಕಾಶವಾಣಿಯ ಎ ಶ್ರೇಣಿಯ ಕಲಾವಿದರಾಗಿರುವ ಅಶ್ವಿನ್ ಅವರು ತಮ್ಮ ನೆಮ್ಮದಿಯ ನುಡಿಸಾಣಿಕೆಗಾಗಿ ಖ್ಯಾತರು.ನಾಡಿನ ಹಲವಾರು ಪ್ರತಿಷ್ಠಿತ ಸಭೆಗಳಲ್ಲಿ ಅಶ್ವಿನ್ ನುಡಿಸುತ್ತಿದ್ದಾರೆ.ಕಿರಿಯ ವಯಸ್ಸಿನಲ್ಲಿಯೇ ಹಲವಾರು ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿಬಂದಿವೆ. ಅನನ್ಯ ಯುವ ಪುರಸ್ಕಾರ, ಶ್ರೀ ಕೃಷ್ಣಗಾನ ಸಭಾ ಚನ್ನೈ ಹಾಗು ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಪ್ರಶಸ್ತಿಗಳು ಅವರ ಮುಡಿಗೇರಿವೆ.



**ಉಸ್ತಾದ್ ಮುರದ್ ಅಲಿ** ಹಾಗೂ **ಉಸ್ತಾದ್ ಫತೇ ಅಲಿ ಖಾನ್** ಸಹೋದರರು ಮೊರಾದಾಬಾದ್ ಘರಾನೆಯ ಸಾರಂಗಿವಾದಕರ ಆರನೇ ತಲೆಮಾರಿಗೆ ಸೇರಿದವರು. ಮುರದ್ ಅಲಿಯವರು ತಮ್ಮ ಅಜ್ಜ ಉಸ್ತಾದ್ ಸಿದಿಕ್ಕಿ ಅಹಮದ್ ಖಾನ್ ಸಾಹೇಬ್ ಹಾಗೂ ತಮ್ಮ ತಂದೆ ಉಸ್ತಾದ್ ಗುಲಾಂ ಶಬ್ಬೀರ್ ಖಾನ್ ಅವರಿಂದ ಸಾರಂಗಿವಾದನವನ್ನು  ಕಲಿತು ಈ ತಲೆಮಾರಿನ ಅತ್ಯಂತ ಪ್ರಖ್ಯಾತ ಸಾರಂಗಿವಾದಕರೆಂದು ಖ್ಯಾತಿ ಪಡೆದಿದ್ದಾರೆ. ಆಕಾಶವಾಣಿಯ ಎ ಗ್ರೇಡ್ ಕಲಾವಿದರಾದ ಇವರು ಭಾರತರತ್ನ ಪಂಡಿತ್ ರವಿಶಂಕರ್ ಸೇರಿದಂತೆ ಹಲವರು ಪ್ರಸಿದ್ಧ ಕಲಾವಿದರಿಗೆ ಪಕ್ಕವಾದ್ಯ ನುಡಿಸಿದ್ದಾರೆ.ಹಾಗೆಯೇ ಚಲನಚಿತ್ರಗಳಿಗೆ ಹಿನ್ನೆಲೆ ಸಂಗೀತವನ್ನೂ ನೀಡಿದ್ದಾರೆ. ಅಂತರ್ರಾಷ್ಟ್ರೀಯ ಖ್ಯಾತಿಯ ಕಲಾವಿದರೊಂದಿಗೆ ಸಂಗೀತದ ಬ್ಯಾಂಡ್ ರಚಿಸಿಕೊಂಡಿದ್ದಾರೆ.ಆದಿತ್ಯ ಬಿರ್ಲಾ ಪುರಸ್ಕಾರ, ಉಸ್ತಾದ್ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರ ಮುಂತಾದ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಉಸ್ತಾದ್ ಫತೇ ಅಲಿ ತಮ್ಮ ಅಜ್ಜ ಉಸ್ತಾದ್ ಸಿದಿಕ್ಕಿ ಅಹಮದ್ ಖಾನ್ ಸಾಹೇಬ್ ಅವರಲ್ಲಿ ಗಾಯನವನ್ನು ಕಲಿತರು.ಸತೀಶ್ ಕುಮಾರ್ ಅವರಲ್ಲಿ ಸಿತಾರ್‌ನ ಮೋಡಿಯ ಪರಿಚಯ ಪಡೆದುಕೊಂಡ ಫತೇ ಅಲಿ ಅವರು ನಂತರ ಉಸ್ತಾದ್ ಶಂಸುದ್ದೀನ್ ಫರಿದಿ ದೇಸಾಯಿ ಅವರಲ್ಲಿ ಹಾಗೂ ತಮ್ಮ ತಂದೆ ಉಸ್ತಾದ್ ಗುಲಾಂಶಬೀರ್ ಖಾನ್ ಅವರ ಮಾರ್ಗದರ್ಶನದಲ್ಲಿ ಇಂದು ಪ್ರಖ್ಯಾತ ಸಿತಾರ್ ವಾದಕರಾಗಿ ರೂಪುಗೊಂಡಿದ್ದಾರೆ.ತಮ್ಮ ಸ್ವತಂತ್ರ ಶೈಲಿಯಿಂದ ಜನರನ್ನು ಮೋಡಿಗೊಳಿಸುವ ಇವರು ಜಗತ್ತಿನಾದ್ಯಂತ ಎಲ್ಲಾ ಪ್ರಖ್ಯಾತ ಸಭೆಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ.

## ಸೆಪ್ಟೆಂಬರ್ ಸೋಮವಾರ 12 SEPTEMBER MONDAY

| | |
|---|---|
| ಸಮಯ | : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ |
| ವಿಷಯ | : ಕರ್ಣ ಭೇಧನ–1 |
| ವಾಚನಕಾರರು | : ಗಣೇಶ್ ಉಡುಪ ಹಾಸನ |
| ವ್ಯಾಖ್ಯಾನಕಾರರು | : ಎಂ ಎಸ್ ವಿನಾಯಕ ಶಿವಮೊಗ್ಗ |

**ಸಂಜೆ 6:30ಕ್ಕೆ**

| | |
|---|---|
| ಪಂಡಿತ್ ರಾಜೀವ್ ತಾರನಾಥ್ | ಸರೋದ್ |
| ಪಂಡಿತ್ ಉದಯರಾಜಕರ್ಪೂರ್ | ತಬಲ |

**6 : 30 p.m.**

| | |
|---|---|
| Pandit Rajiv Taranath | Sarod |
| Ustad Udayrajkarpur | Tabla |



ಅಂತರ್ರಾಷ್ಟ್ರೀಯ ಖ್ಯಾತಿಯ **ಪಂಡಿತ್ ರಾಜೀವ್ ತಾರಾನಾಥ್** ಅವರು ಈ ನಾಡಿನ ಹಾಗೂ ವಿಶ್ವದ ಅಗ್ರಗಣ್ಯ ಸರೋದ್‌ವಾದಕರು. ಮೈಹರ್ ಘರಾನೆಯ ಅತಿ ಹಿರಿಯ ಸರೋದ್‌ವಾದಕರು ಹಾಗೂ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಶೈಲಿಯ ನಿಷ್ಠಾವಂತ ಪ್ರತಿಪಾದಕರು. ಪರಿಪೂರ್ಣವಾದ ಸ್ವರಕ್ಕಾಗಿ ನಿರಂತರ ಶೋಧದಲ್ಲಿ ತೊಡಗುತ್ತಾ, ಈ ಪರಿಪೂರ್ಣತೆಯನ್ನೇ ಆರಾಧಿಸುತ್ತಾ, ಅದರಲ್ಲೇ ಸುಖಕಂಡವರು ಅವರು. ಅವರ ಮೀಟಿನ ಪ್ರತಿಸ್ವರವೂ ಆಳವಾದ ಹಂಬಲಿಕೆಯ, ಮಧುರನಾದದ ಜಾಡನ್ನು ನಮ್ಮಲ್ಲಿ ಉಳಿಸುತ್ತದೆ.ಚಿಂತನೆ ಮತ್ತು ಮನೋಧರ್ಮದ ಪ್ರೌಢಿಮೆಯಲ್ಲಿ ತಮ್ಮ ಸಮಕಾಲೀನ ಸರೋದ್‌ವಾದಕರಿಗಿಂತ ಬಹಳ ಪ್ರತ್ಯೇಕವಾಗಿ ಮತ್ತು ಅತ್ಯಂತ ಎತ್ತರದಲ್ಲಿ ನಿಲ್ಲುವ ಇವರು ಈ ಕಾಲದ ಒಬ್ಬ ಶ್ರೇಷ್ಠ ಕಲಾತಪಸ್ವಿ.ಅಧ್ಯಾಪನದ ಮೂಲಕ ಮೈಹರ್ ಘರಾನ ಮತ್ತು ಅದರ ದೊಡ್ಡ ಸಂಗೀತವನ್ನು ಉಳಿಸಿ ಪರಂಪರೆಯನ್ನು ಬೆಳೆಸಬೇಕೆಂಬ ಆ ಘರಾನದ ಉತ್ಸುಕತೆ ಮತ್ತು ಬದ್ಧತೆಯನ್ನೂ ಮೈಗೂಡಿಸಿಕೊಂಡಿರುವ ಇವರು ನಮ್ಮ ನಡುವಿನ ಅತ್ಯಂತ ಮೇಧಾವಿ ಹಾಗೂ ಸೃಜನಶೀಲ ಗುರುಗಳು ಕೂಡ.

ಗಾಯನ ಸಮಾಜದ ಸಂಗೀತ ಕಲಾರತ್ನ, ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ, ಕರ್ನಾಟಕ ಸರ್ಕಾರದ ಸಂಗೀತರತ್ನ ಟಿ ಚೌಡಯ್ಯ ಪ್ರಶಸ್ತಿ, ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹಲವಾರು ಸಿನಿಮಾಗಳಲ್ಲಿ ಇವರು ನೀಡಿರುವ ಸಂಗೀತಕ್ಕೆ ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಬಂದಿವೆ. ತಂದೆ ಪಂಡಿತ್ ತಾರಾನಾಥರ ನೆನಪಿನಲ್ಲಿ ಒಂದು ಸಂಸ್ಥೆಯನ್ನು ಕಟ್ಟಿಕೊಂಡು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಸಂಘಟಿಸುತ್ತಾ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.


| | |
|---|---|
| ಸಮಯ | : ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ |
| ವಿಷಯ | : ಕರ್ಣ ಭೇಧನ–1 |
| ವಾಚನಕಾರರು | : ಗಣೇಶ್ ಉಡುಪ ಹಾಸನ |
| ವ್ಯಾಖ್ಯಾನಕಾರರು | : ಎಂ ಎಸ್ ವಿನಾಯಕ ಶಿವಮೊಗ್ಗ |

**ಸಂಜೆ 6:30ಕ್ಕೆ**

| | |
|---|---|
| ವಿದ್ವಾನ್ ಟಿ.ಎನ್.ಎಸ್ ಕೃಷ್ಣ | ಹಾಡುಗಾರಿಕೆ |
| ವಿದ್ವಾನ್ ಮತ್ತೂರು ಶ್ರೀನಿಧಿ | ವಯೋಲಿನ್ |
| ವಿದ್ವಾನ್ ತಿರುವಾರೂರ್ ಭಕ್ತವತ್ಸಲಂ | ಮೃದಂಗ |
| ವಿದ್ವಾನ್ ಬಿ ಎಸ್ ಪುರುಷೋತ್ತಮ್ | ಖಂಜಿರ |

**6 : 30 p.m.**

| | |
|---|---|
| Vidwan TNS Krishna | Vocal |
| Vidwan Mathur Srinidhi | Violin |
| Vidwan Thiruvarur Bhaktavatsalam | Mridangam |
| Vidwan B.S.Purushotham | Khanjeera |



ಪದ್ಮಭೂಷಣ, ಸಂಗೀತ ಕಲಾನಿಧಿ ಟಿ ಎನ್ ಶೇಷಗೋಪಾಲನ್ ಅವರ ಮಗ ಹಾಗೂ ಶಿಷ್ಯ.ಮೂರನೆ ವರ್ಷದಲ್ಲೇ ನೂರಕ್ಕೂ ಹೆಚ್ಚು ರಾಗಗಳನ್ನು ಪತ್ತೆ ಹಚ್ಚಬಲ್ಲ ವಿದ್ವತ್. ಎಂಟನೇ ವರ್ಷದಲ್ಲೇ ಪೂರ್ಣ ಪ್ರಮಾಣದ ಕಾರ್ಯಕ್ರಮ ಕೊಟ್ಟ ಹೆಗ್ಗಳಿಕೆ ಅದೂ ಗುರವಾಯುರ್ ದೊರೈ ಅವರ ಪಕ್ಕವಾದ್ಯದಲ್ಲಿ. **ಟಿ.ಎನ್.ಎಸ್. ಕೃಷ್ಣ** ಮ್ಯೂಸಿಕ್ ಅಕಾಡೆಮಿ ಸೇರಿದಂತೆ ಭಾರತದ ಎಲ್ಲಾ ಪ್ರಮುಖ ಸಭೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಅಷ್ಟೇ ಅಲ್ಲದೆ ವಿದೇಶಗಳಲ್ಲೂ ಹಲವು ಕಡೆ ಹಲವು ಬಾರಿ ಕಾರ್ಯಕ್ರಮ ನೀಡಿದ್ದಾರೆ. ವಯೋಲಿನ್‌ನಲ್ಲೂ ಪರಿಣಿತಿ ಇರುವ ಇವರು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮಾರ್ದವ ಧ್ವನಿ, ಅದ್ಭುತ ಕ್ರಿಯಾತ್ಮಕತೆ ಹಾಗೂ ಸಂಪ್ರದಾಯಬದ್ಧ ಸಂಗೀತದಿಂದಾಗಿ ಇಂದು ಕರ್ನಾಟಕ ಸಂಗೀತದಲ್ಲಿ ವಿದ್ವತ್‌ಪೂರ್ಣ ಸಂಗೀತಗಾರರಾಗಿ ಹೆಸರು ಮಾಡಿದ್ದಾರೆ.

**ಸಂಜೆ 6:30ಕ್ಕೆ**

| | |
|---|---|
| ವಿದ್ವಾನ್ ಉನ್ನಿಕೃಷ್ಣನ್ | ಗಾಯನ |
| ವಿದ್ವಾನ್ ಎಂ.ಎ. ಸುಂದರೇಶ್ವರನ್ | ವಯೋಲಿನ್ |
| ವಿದ್ವಾನ್ ತಿರುವಾರೂರ್ ಭಕ್ತವತ್ಸಲಂ | ಮೃದಂಗ |
| ವಿದ್ವಾನ್ ಬಿ ಎಸ್ ಪುರುಷೋತ್ತಂ | ಖಂಜಿರ |

6 : 30 p.m.

| | |
|---|---|
| Vidwan Unnikrishnan | Vocal |
| Vidwan M.A.Sundareswaran | Violin |
| Vidwan Thiruvarur Bhaktavatsalam | Mridangam |
| Vidwan .S.Purushotham | Khanjeera |



ಖ್ಯಾತ ಕೈಗಾರಿಕೋದ್ಯಮಿಗಳು ಮತ್ತು ವೈದ್ಯರ ಕುಟುಂಬಕ್ಕೆ ಸೇರಿದ **ವಿದ್ವಾನ್ ಪಿ ಉನ್ನಿಕೃಷ್ಣನ್** ಕರ್ನಾಟಕ ಸಂಗೀತದಲ್ಲಿ ಮೂಡಿರುವ ಬಹುಮುಖ ಪ್ರತಿಭೆ. ಅವರು ಸಂಗೀತ ಕಲಾನಿಧಿ ವಿದ್ವಾನ್ ಎಸ್ ರಾಮನಾಥನ್ ಅವರಲ್ಲಿ ಕಲಿತವರು.  ವಿದುಷಿ ಟಿ ಬೃಂದಮ್ಮ ಮತ್ತು ವಿದ್ವಾನ್ ಟಿ ವಿಶ್ವನಾಥನ್ ಅವರಲ್ಲಿ ಧನಮ್ಮ ಅವರ ಬಾನಿಯಲ್ಲಿ ಆರು ತಿಂಗಳ ಕಾಲ ತರಬೇತಿ ಪಡೆದರು. ಚಲನಚಿತ್ರ ಹಿನ್ನೆಲೆ ಗಾಯನದಲ್ಲೂ ಶಾಸ್ತ್ರೀಯ ಸಂಗೀತದಷ್ಟೇ ಎತ್ತರಕ್ಕೆ ಏರಿದವರು ಶ್ರೀ ಉನ್ನಿಕೃಷ್ಣನ್.  ಎ.ಆರ್.ರೆಹಮಾನ್ ಅವರು ರಚಿಸಿ ಸಂಗೀತ ನಿರ್ದೇಶಿಸಿದ ಗೀತೆಗಳನ್ನು ಹಾಡಿದವರು. ಶ್ರೀ ಉನ್ನಿಕೃಷ್ಣನ್ ಅವರು ಹಾಡಿದ ಮೊಟ್ಟ ಮೊದಲ ಗೀತೆಗೇ ರಾಷ್ಟ್ರಪ್ರಶಸ್ತಿ ಲಭ್ಯ. ಒಂದು ಹೊಸಬಗೆಯ ಜಾಸ್ ಪ್ರಸ್ತುತಿಯನ್ನು ಮಾಡುವುದರ ಮೂಲಕ ಉನ್ನಿಕೃಷ್ಣನ್ ಪ್ರಯೋಗಶೀಲತೆಗೂ ಹೆಸರಾದವರು.

**ಸಂಜೆ 6:30ಕ್ಕೆ**

| | |
|---|---|
| ವಿದ್ವಾನ್ ಮಹಾರಾಜಪುರಂ ರಾಮಚಂದ್ರ | ಗಾಯನ |
| ವಿದ್ವಾನ್ ಮತ್ತೂರು ಶ್ರೀನಿಧಿ | ವಯೋಲಿನ್ |
| ವಿದ್ವಾನ್ ತುಮಕೂರು ಬಿ ರವಿಶಂಕರ್ | ಮೃದಂಗ |
| ವಿದ್ವಾನ್ ತುಮಕೂರು ಬಿ ಶಶಿಶಂಕರ್ | ಘಟ |

6 : 30 p.m.

| | |
|---|---|
| Vidwan Maharajapuram Ramachandran | Vocal |
| Vidwan Mathur Srinidhi | Violin |
| Vidwan Tumkur B.Ravishankar | Mridangam |
| Vidwan Tumkur B.Shashishankar | Ghatam |



**ವಿದ್ವಾನ್ ಮಹಾರಾಜಪುರಂ ರಾಮಚಂದ್ರನ್** ಅವರು ಮಹಾರಾಜಪುರಂ ಸಂತಾನಂ ಅವರ ಹಿರಿಯ ಮಗ. ತಾತ ವಿಶ್ವನಾಥ ಅಯ್ಯರ್ ಹಾಗೂ ತಂದೆ ಸಂತಾನಂ ಈ ಇಬ್ಬರು ದಿಗ್ಗಜರಿಂದ ಪಾಠ ಕಲಿತ ಸೌಭಾಗ್ಯ ಇವರದ್ದು. ಮಹಾರಾಜಪುರಂ ರಾಮಚಂದ್ರನ್ ಅವರು ಭಾರತದ ಹೆಚ್ಚಿನ ಪ್ರತಿಷ್ಠಿತ ಸಭೆಗಳಲ್ಲಿ ಕಾರ್ಯಕ್ರಮ ಕೊಡುವುದರ ಜೊತೆಗೆ ಅಮೇರಿಕ, ಯುರೋಪ್, ಶ್ರೀಲಂಕ ಆಸ್ಟ್ರೇಲಿಯ, ಹೀಗೆ ಹಲವು ದೇಶಗಳಲ್ಲಿ ವ್ಯಾಪಕವಾಗಿ ಕಾರ್ಯಕ್ರಮ ನೀಡಿದ್ದಾರೆ. ಅಕಾಶವಾಣಿ ಹಾಗೂ ದೂರದರ್ಶನದ ಎ ಟಾಪ್ ಕಲಾವಿದರಾಗಿರುವ ಇವರು ತಮ್ಮ ಬಾನಿಯ ಅತ್ಯುತ್ತಮ ಗುಣಗಳನ್ನೆಲ್ಲಾ ಮೈಗೂಡಿಸಿಕೊಂಡಿದ್ದಾರೆ.

ಇವರಿಗೆ ಸಂಗೀತ ಚೂಡಾಮಣಿ, ಗಾನಕಲಾನಿಧಿ, ಇಸೈ ಕಲೈ ಸೆಲ್ವನ್ ಮೊದಲಾದ ಹಲವು ಬಿರುದುಗಳು ಬಂದಿವೆ. ದೇಶ ವಿದೇಶಗಳಲ್ಲಿ ಹಲವು ಸಂಘಟನೆಗಳಲ್ಲಿ ಸಂಗೀತವನ್ನು ಕುರಿತು ಕಾರ್ಯಾಗಾರವನ್ನು ನಡೆಸಿದ್ದಾರೆ.

**ಸಂಜೆ 6:30ಕ್ಕೆ**

| | |
|---|---|
| ವಿದುಷಿ ಐಶ್ವರ್ಯ ವಿದ್ಯಾ ರಘುನಾಥ್ | ಗಾಯನ |
| ವಿದ್ವಾನ್ ರಾಹುಲ್ | ವಯೋಲಿನ್ |
| ವಿದ್ವಾನ್ ಬಿ ಸಿ ಮಂಜುನಾಥ್ | ಮೃದಂಗ |
| ವಿದ್ವಾನ್ ಭಾರ್ಗವ ಹಾಲಂಬಿ | ಖಂಜಿರ |

6 : 30 p.m.

| | |
|---|---|
| Vidushi Aishwarya Vidhya Raghunath | Vocal |
| Vidwan Rahul | Violin |
| Vidwan Manjunath B.C | Mridangam |
| Vidwan Bhargava Halambi | Khanjeera |




**ಐಶ್ವರ್ಯ ವಿದ್ಯಾ ರಘುನಾಥ್** ಇಂದು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ತುಂಬಾ ಹೆಸರು ಮಾಡಿರುವ ಯುವ ಕಲಾವಿದೆ.ಸಂಗೀತ ಪ್ರೇಮಿಗಳ ಕುಟುಂಬದಿಂದ ಬಂದ ಐಶ್ವರ್ಯ ಓದಿದ್ದು ಬಯೋಟೆಕ್ನಾಲಜಿ ಬಿ.ಇ. ಆದರೆ ಸಂಗೀತದ ಒಲವಿನಿಂದ ಈಗ ಸಂಪೂರ್ಣ ಸಂಗೀತದಲ್ಲಿ ತೊಡಗಿಕೊಂಡಿದ್ದಾರೆ. ಸಂಗೀತ ಕಲಾಚಾರ್ಯ ಶ್ರೀಮತಿ ಸೀತಾಲಕ್ಷ್ಮಿ ವೆಂಕಟೇಶನ್, ಪದ್ಮಭೂಷಣ ಶ್ರೀ ಪಿ ಎಸ್ ನಾರಾಯಣಸ್ವಾಮಿ, ವೇಗವಾಹಿನಿ ವಿಜಯರಾಘವನ್ ಅವರಲ್ಲಿ ಕಲಿತು ಸೆಮ್ಮಂಗುಡಿ ಹಾಗೂ ವೀಣಾ ಧನಮ್ಮಾಳ್ ಬಾನಿಯ ಸಂಗೀತವನ್ನು ಮೈಗೂಡಿಸಿಕೊಂಡಿದ್ದಾರೆ.ಶುದ್ಧ, ನಿಖರ ಹಾಗೂ ಉನ್ನತ ಮಟ್ಟದ ಶಾಸ್ತ್ರೀಯ ಪರಂಪರೆಗೆ ಹೆಸರಾದ ಐಶ್ವರ್ಯ ಈಗಾಗಲೇ ದೇಶ ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ. ಹಲವಾರು ಪ್ರತಿಷ್ಠಿತ ಪ್ರಶಸ್ತಿ ಬಹುಮಾನಗಳನ್ನು ಕಿರಿಯ ವಯಸ್ಸಿನಲ್ಲೇ ತಮ್ಮದಾಗಿಸಿಕೊಂಡಿರುವ ಇವರು ಆಕಾಶವಾಣಿ ಹಾಗೂ ದೂರದರ್ಶನದ ಎ ದರ್ಜೆ ಕಲಾವಿದೆ.

## ಸೆಪ್ಟೆಂಬರ್ ಶನಿವಾರ 17 SEPTEMBER SATURDAY

| ಸಂಜೆ 6:30ಕ್ಕೆ | | 6 : 30 p.m. | |
|---|---|---|---|
| ಪಂಡಿತ್ ಡಾ.ರವೀಂದ್ರ ಗುರುರಾಜ ಕಾಟೋಟಿ | ಹಾರ್ಮೋನಿಯಂ | Dr.Ravindra Gururaj Katoti | Harmonium |
| ವಿದುಷಿ ಎಸ್ ವಿ ಸಹನಾ | ವೀಣೆ | Vidushi Sahana | Veena |
| ವಿದ್ವಾನ್ ಜಯಚಂದ್ರ ರಾವ್ | ಮೃದಂಗ | Vidwan Jayachandra Rao | Mridangam |
| ಪಂಡಿತ್ ವಿಶ್ವನಾಥ್ ನಾಕೋಡ್ | ತಬಲ | Ustad Vishwanath Nakod | Tabla |





**ಡಾ. ರವೀಂದ್ರ ಗುರುರಾಜ ಕಾಟೋಟಿ**ಯವರು ಪಂಡಿತ್ ರಾಮಬಾವು ಬಿಜಾಪುರೆಯವರಲ್ಲಿ ಹಾರ್ಮೋನಿಯಂ ಕಲಿತು ಇಂದು ಸೊಗಸಾದ ಹಾರ್ಮೋನಿಯಂವಾದಕರಾಗಿ ಹೆಸರು ಮಾಡಿದ್ದಾರೆ. ವಿಸ್ತಾರವಾದ ಅಲಾಪನೆ, ಸೊಗಸಾದ ಲಯಕಾರಿಯು ಮೇಳೈಸಿದ ಗಾಯಕಿ ಅಂಗದ ಪ್ರಸ್ತುತಿ ಇವರ ವಿಶೇಷತೆ. ಖಯಾಲ್, ಠುಮ್ರಿ, ಧುನ್ ಹಾಗೂ ರಂಗಗೀತೆಯಲ್ಲೂ ಅಷ್ಟೇ ಪರಿಣತಿ ಇದೆ.ಹಲವಾರು ಪ್ರಶಸ್ತಿಗಳು ಇವರನ್ನು ಅರಸಿಕೊಂಡು ಬಂದಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಇವರಿಗೆ ಮೂರುವರ್ಷ ಸ್ಕಾಲರ್ ಷಿಪ್ ನೀಡಿ ಗೌರವಿಸಿದೆ. ಸುರ ರತ್ನ ಮೊದಲಾದ ಬಿರುದುಗಳು ಇವರಿಗೆ ಬಂದಿವೆ. ಗಂಗೂಬಾಯಿ ಹಾನ್‌ಗಲ್, ಪಂಡಿತ್ ಭೀಮಸೇನ ಜೋಷಿ, ಜಸ್ ರಾಜ್, ರಷಿದ್ ಖಾನ್, ಶುಭ ಮುದ್ಗಲ್ ಮೊದಲಾದ ಖ್ಯಾತ ಸಂಗೀತಗಾರರಿಗೆ ಹಾರ್ಮೋನಿಯಂ ಸಹಕಾರ ನೀಡಿದ್ದಾರೆ. ಹಲವಾರು ಸೋಲೊ ಕಾರ್ಯಕ್ರಮಗಳನ್ನೂ ನೀಡಿದ್ದಾರೆ.

ಬಾಲ್ಯದಿಂದಲೇ ವೀಣಾವಾದನದಲ್ಲಿ ಒಲವು ತೋರಿದ **ಎಸ್.ವಿ. ಸಹನಾ** ವಿದ್ವಾನ್ ಎಂ.ಜೆ.ಶ್ರೀನಿವಾಸ ಅಯ್ಯಂಗಾರ್ ಅವರಲ್ಲಿ ಹನ್ನೆರೆಡು ವರ್ಷಗಳ ಕಾಲ ಸಂಗೀತಾಭ್ಯಾಸ ಮಾಡಿದ್ದಾರೆ. ಪದ್ಮಭೂಷಣ, ಸಂಗೀತ ಕಲಾನಿಧಿ ವಿದ್ವಾನ್ ಟಿ.ಎನ್ ಶೇಷಗೋಪಾಲನ್ ಅವರಲ್ಲಿ ಹೆಚ್ಚಿನ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಡಾಕ್ಟೊರಲ್ ಪ್ರಬಂಧವನ್ನು ಮಂಡಿಸಿದ್ದಾರೆ. ಆಕಾಶವಾಣಿಯ ಅಖಿಲ ಭಾರತ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿರುವ ಸಹನಾ, ಆಕಾಶವಾಣಿ ಹಾಗೂ ದೂರದರ್ಶನಗಳ 'ಎ' ಗ್ರೇಡ್ ಕಲಾವಿದೆ. ಬೆಂಗಳೂರು ಗಾಯನ ಸಮಾಜದ ಅತ್ಯುತ್ತಮ ವಾದಕಿ ಮತ್ತು ಸಂಗೀತ ಕಲಾವಿದೆ ಬಹುಮಾನ ಹಾಗೂ ಅನನ್ಯ ಯುವ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಹಲವಾರು ಪ್ರತಿಷ್ಠಿತ ಸಭೆಗಳಲ್ಲಿ ತಮ್ಮ ಕಾರ್ಯಕ್ರಮವನ್ನು ನೀಡಿದ್ದಾರೆ. ಪದ್ಮಭೂಷಣ ಟಿ ವಿ ಗೋಪಾಲಕೃಷ್ಣನ್, ವಿದ್ವಾನ್ ಮನ್ನಾರ್‌ಗುಡಿ ಈಶ್ವರನ್ ಮೊದಲಾದ ಹಿರಿಯ ವಿದ್ವಾಂಸರು ಇವರಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ.

## 18

ಸೆಪ್ಟೆಂಬರ್ 18, 2016 ಭಾನುವಾರ, ಬೆಳಗ್ಗೆ 10.30ಕ್ಕೆ
ಗಣಪತಿ ಹೋಮ ಹಾಗೂ ರುದ್ರಾಭಿಷೇಕ
ಚಳ್ಳಕೆರೆ ಸಹೋದರರಿಂದ

September 18, 2016 SUNDAY 10-30 a.m.
**Ganapathi Homa & Rudrabhisheka**
**by Challakere Brothers**

## ಮನವಿ

ಸನ್ಮಾನ್ಯರೆ,

ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದೇ ಹೆಸರುವಾಸಿಯಾಗಿದೆ. ರಾಜಾಶ್ರಯದಿಂದಾಗಿ ಹಲವಾರು ಕಲೆಗಳು ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಆದರೆ ಇಂದು ಕಲೆಯಬೀಡಿನಲ್ಲಿ, ಎಲ್ಲಾ ಕಲೆಗಳೂ, ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ಅವನತಿ ಹೊಂದುತ್ತಿವೆ. ಇಂಥ ಪರ್ವಕಾಲದಲ್ಲಿ, ರಾಜ್ಯಕ್ಕೆ, ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ ಒಂದು ಅಸ್ಮಿತೆಯನ್ನು ನೀಡಿರುವ ಈ ಸಾಂಪ್ರದಾಯಿಕ ಅಭಿಜಾತ ಕಲೆಯ ಮಹಾನ್ ಪರಂಪರೆಯನ್ನು ಜತನವಾಗಿ ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ತಲುಪಿಸಬೇಕಾದ ಹೊಣೆಗಾರಿಕೆ ನಮ್ಮ ನಿಮ್ಮಂತಹ ಎಲ್ಲಾ ಸಂಗೀತ ಪ್ರೇಮಿಗಳ ಮೇಲಿದೆ.

ಎಸ್ ಪಿ ವಿ ಜಿ ಎಂ ಸಿ ಟ್ರಸ್ಟ್ 54 ವರ್ಷಗಳಿಂದ ಸಾಂಸ್ಕೃತಿಕ ಹರಿಕಾರನ ಹೊಣೆಗಾರಿಕೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದೆ.ಅಭಿಜಾತ ಸಂಗೀತವನ್ನು ಜನರತ್ತ ಸಮರ್ಥವಾಗಿ ಒಯ್ಯುವ ಒಂದು ಪ್ರಮುಖ ವೇದಿಕೆಯಾಗಿದೆ.ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತದ ದಿಗ್ಗಜರೆಲ್ಲಾ ಈ ವೇದಿಕೆಯಲ್ಲಿ ಕಾರ್ಯಕ್ರಮ ನೀಡುತ್ತಾ ಬಂದಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕದ ಹಲವಾರು ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಈ ರೀತಿ ಹಲವು ಕಡೆಗಳಿಂದ ದೊರಕಿದ ಸಹಕಾರದಿಂದ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗಿದೆ.

ಐವತ್ತು ವರ್ಷಗಳ ನಿರಂತರ ಸೇವೆಯ ನಂತರ ಈ ವರ್ಷ 55ನೆಯ ಪಾರಂಪರಿಕ ಸಂಗೀತೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ವರ್ಷದಂತೆ ಹಿರಿಯ ಕಿರಿಯರೆಲ್ಲಾ ಒಟ್ಟಾಗಿ ಇದರಲ್ಲಿ ಪಾಲ್ಗೊಳ್ಳಲ್ಲಿದ್ದಾರೆ. ನಿಮ್ಮಂತಹ ದಾನಿಗಳ ಕಲಾರಸಿಕರ ಔದಾರ್ಯವನ್ನು ನೆಚ್ಚಿಕೊಂಡೇ ನಮ್ಮ ಸಂಸ್ಥೆ ಇಷ್ಟು ವರ್ಷಗಳು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನಿಮ್ಮ ಸಹಕಾರವನ್ನು ವಿಶ್ವಾಸಪೂರ್ವಕವಾಗಿ ನೆನೆಯುತ್ತಾ, ಮತ್ತೆ ತಾವೆಲ್ಲರೂ ಆರ್ಥಿಕ ಔದಾರ್ಯವನ್ನು ತೋರಿ ನಮ್ಮ ಸಂಸ್ಥೆಯನ್ನು ಮುಂದಕ್ಕೆ ನಡೆಸಿಕೊಂಡು ಹೋಗಿ, ಈ ನೆಲದ ಅಮೂಲ್ಯ ಕಲಾ ಪರಂಪರೆಯನ್ನು ಕಾಪಾಡುವ ನಿಟ್ಟಿನಲ್ಲಿ ತಮ್ಮ ಸಹಾಯಹಸ್ತ ಚಾಚಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.

ವಿಶ್ವಾಸಪೂರ್ವಕವಾಗಿ

ಧರ್ಮದರ್ಶಿಗಳು

## An Appeal

Mysore, the cultural capital of Karnataka is resonant with the music of great maestros. SPVGMC Trust has been playing a crucial role in preserving the continuity of this resonance. It is shouldering the responsibility of keeping classical music alive with all its grandeur. It has been organizing music concerts during the Ganesha festival since 54 years.

All the maestros of Carnatic music, right from Chembai, T.N Krishnan, K.V. Narayanaswamy, S. Ramanathan, S.Rajam, T R Mahalingam, Lalgudi Jayraman, Paroor Gopalakrishnan, D.K. Jayaraman, T.N.Sheshagopal, Madhurai Mani Iyer, R.K. Srikanthan, Umayalapuram Shivaraman, Vellore Ramabhadran, Palghat Raghu to youngsters like T.M Krisna, Ravikiran N have performed here umpteen number of times. Even the maestros of Hindustani Music like N.Rajam, Hariprasad Chourasia, Gangubai Hangal, Rajiv Taranath have also performed here. All of them without an exception have recognized the significance of this trust. They consider it a privilege to perform here.

SPVGMC also believes in training and educating the listeners. It has also organized 'Learning sessions' tutored by great maestros like S.Rajam, P.S. Narayanaswamy, Chitraveena N Ravikiran, and such others. Highly enlightening and educative 'Lecture Demonstrations' of stalwarts like Umayalapur Sivaraman, T.N.Krishnan, T.N. Sheshagopalan, Mannargudi Eswaran, have also been organized for the benefit of listeners.

SPVGMC trust has been playing the vital role of a cultural ambassador in carrying Carnatic music to the mass. Now its role is all the more crucial in view of the threat posed by the forces of globalization. At this juncture, support of people like you is very crucial to take the trust forward and embark on activities of cultural significance. As you are well aware of the fact that the organization runs purely on the goodwill of the public and the munificence of the patrons, we are really confident that kalarasikas like you can understand our concern and extend your support.

Yours Sincerely
Trustees

**ಎಸ್.ಪಿ.ವಿ.ಜಿ.ಎಂ.ಸಿ. ಟ್ರಸ್ಟ್ (ರಿ)**
೮ನೇ ಕ್ರಾಸ್, ವಿ.ವಿ. ಮೊಹಲ್ಲಾ,
ಮೈಸೂರು

**SPVGMC Trust (R)**
8th Cross, V.V. Mohalla
Mysuru

# ೫೫ನೇ ಪಾರಂಪರಿಕ ಸಂಗೀತೋತ್ಸವ

5 ಸೆಪ್ಟೆಂಬರ್ 2016 ರಿಂದ 17 ಸೆಪ್ಟೆಂಬರ್ 2016





**Patron :**
K V Murthy
**President :**
R Vasudeva Murthy
**Vice President :**
M Laxminarayan

**Secretary :**
C R Himamshu
**Joint Secretary :**
N Nagaraj
**Treasurer :**
C Cheluvaraj

**Trustees :**
Venugopal T S
Shylaja
Amaresh Das
Sridhar M K
Vasanth

# *55th Heritage Music Festival*

**5th September 2016 to 17th September 2016**

**S.P.V.G.M.C. Trust,** # 2916, 5th Main, 8th Cross, V.V.Mohalla, Mysuru-570002.
Ph : 00821-2598782, Mob : 9845501178
www.8thcrossganesha.org spvgmctrust@gmail.com